ಒಂದಾಣೆ ಮಾಲೆ 257

ಅಭಿನಯ ಗೀತಾವಳಿ



ಬೆಲೆ: 1 ಆಣೆ.

ಕವಿ: ದಿ| ಹೊಸಬೆಟ್ಟು ವೆಂಕಟರಮಣಯ್ಯ. ಸಂಗ್ರಾಹಕ: ಕೆ. ವೆಂಕಟ್ರರಾಯಾಚಾರ್ಯ.

ಮೊದಲ ಮಾತುಗಳು.

'ಮಕ್ಕಳ ಹಾಡುಗಳು' ಎಂಬೀ ಅಭಿನಯ ಗೀತಗಳ ಸಂಕಲನವು ಸುರತ್ಕಲ್ಲು ಕೇಂದ್ರದ ಹೊಸಬೆಟ್ಟು ಗ್ರಾಮದ ಉಪ್ಪಜೆಯಲ್ಲಿದ್ದ ದಿ| ಶ್ರೀ| ಎಚ್. ವೆಂಕಟರಮಣಯ್ಯನವರಿಂದ ರಚಿತವಾಗಿದೆ. ಶಾಲಾಪಾಠಗಳಲ್ಲಿ ಉಪಯುಕ್ತವಾಗುವ ಎಂಟು ಹಾಡುಗಳು ಇಲ್ಲಿವೆ.

ಶ್ರೀಯುತರು ಅಧ್ಯಾಪಕರಾಗಿದ್ದು ಇವನ್ನು ರಚಿಸಿದುದರಿಂದ ಹಾಗೂ ಆ ಕಾಲದಲ್ಲಿ ಜನಮೆಚ್ಚಿಕೆಯನ್ನು ಇವು ಪಡೆದುದರಿಂದ ಇವುಗಳ ಉಪಯುಕ್ತತೆಯ ಬಗೆಗೆ ಬೇರೆ ಹೆಚ್ಚು ಹೇಳಬೇಕಾಗಿಲ್ಲ! ಇಡ್ಯಗ್ರಾಮದ ಇಗರ್ಜಿ ಶಾಲೆಯಲ್ಲಿ ಮಾಸ್ತರರಾಗಿದ್ದು, ಕಾರಣಾಂತರದಿಂದ ಅಲ್ಲಿಂದ ಹೊರಟ ಇವರು ಹಾಗೂ ಇತರ ಮಹನೀಯರ ಪರಿಶ್ರಮದ ಫಲವಾಗಿ 'ವಿದ್ಯಾದಾಯಿನಿ ಶಾಲೆ'ಯು ಪ್ರಾರಂಭವಾದುದು! ಮೊತ್ತಮೊದಲು ಇಡ್ಯ ಮಹಾಲಿಂಗೇಶ್ವರ ದೇವಳದ ಗೋಪುರದಲ್ಲಿ ಆರಂಭವಾದ ಈ ವಿದ್ಯಾಮಂದಿರವು ಕ್ರಮಶಃ ಊರೂರುಗಳ ಹಲವಾರು ಮಂದಿಯ ನೆರವಿಂದ ಬೆಳೆದು, ನಮ್ಮ ಜಿಲ್ಲೆಯಲ್ಲಿ–ಅಷ್ಟು ಮಾತ್ರವಲ್ಲ, ನಮ್ಮ ಪ್ರಾಂತ್ಯದಲ್ಲಿ–ಹೆಸರುಗೊಂಡ ವಿದ್ಯಾಕ್ಷೇತ್ರವಾಗಿದೆಯೆಂದರೆ ಅತಿಶಯೋಕ್ತಿಯಲ್ಲ!

ಶ್ರೀಯುತರು ಬರೆದ 'ಹೆಂಗಳ ಅಂಗೈಗನ್ನಡಿ'ಯು ಇದೇ ಪ್ರಭಾತದವರ 'ಸುವಾಸಿನಿ' ವಾರಪತ್ರಿಕೆಯಲ್ಲಿ (ಇ.1950) ಪ್ರಕಟವಾಗಿತ್ತು. ಶಾಲಾ ಮಕ್ಕಳು ಹಾಡುವ ದೇವರ ಹಾಡುಗಳು–ಇವರ ಕೃತಿಗಳು–ಅನೇಕ ಇವೆ. ಈ ಪದ್ಯಗಳನ್ನು ಹಲವೆಡೆಯಿಂದ ಸಂಗ್ರಹಿಸಲು ತೊಡಗಿದಾಗ ಹೊಂದಿದ್ದ ಸಂಕಷ್ಟ ಹೇಳಿತೀರದು. ಗೊತ್ತಿದ್ದವರು ಸಾದಾ ಹೇಳಲೊಲ್ಲರು; ಬರೆದಿಟ್ಟ ಪುಸ್ತಕವು ಕಣ್ಣಿಗೆ ಸಿಲುಕದು. ಹಾಗಾಗಿ, ಇಂತಹ ಹಾಡುಗಳು ಮಾಲೆಗುಂಪಾಗಿರುವುದು ಚೆನ್ನಲ್ಲವೆಂದು, ಈ ಚಿಕ್ಕ ಹೊತ್ತಗೆಯಲ್ಲಾದರೂ ಕೆಲವು ಹಾಡುಗಳು ಪ್ರಕಟವಾಗಲೆಂದು, ಇವರ ಕೃತಿಗಳೆಲ್ಲಾ ಒಂದಾಗಿ ಅಚ್ಚಾಗಲು ಇದು ಪ್ರೇರಣೆಯಾಗಲೆಂದು ಭಾವಿಸಿದ್ದೇನೆ. ಇವನ್ನು ಸಂಗ್ರಹಿಸಲು ನೆರವಾದ ದಿವಂಗತ ವೆಂಕಟರಮಣಯ್ಯನವರ ಕುಟುಂಬದವರು ಹಾಗೂ ನನ್ನ ಗೆಳೆಯರೆಲ್ಲರಿಗೂ, ಇದೀಗ ಪ್ರಕಟಿಸಿದ 'ಒಂದಾಣೆ ಮಾಲೆ'ಯ ಸಂಪಾದಕರಿಗೂ ನನ್ನ ಸವಿನಯ ಕೃತಜ್ಞತೆಗಳು ಸಲ್ಲಬೇಕಾಗಿವೆ. ಶ್ರೀಯುತರಿಗೆ ಇದೇ ನನ್ನ 'ಶ್ರದ್ಧಾಂಜಲಿ.'

ಲೌಕಿಕರೂ ಅಧ್ಯಾಪಕ ಬಂಧುಗಳೂ ಶಾಲೆಯ ಮಕ್ಕಳೂ ಇದನ್ನು ಆದರಿಸುವರೆಂದು ನಂಬಿದ್ದೇನೆ. ಇದರಿಂದ ಜನತಾರೂಪಿ 'ಶ್ರೀ ಗಿರೀಶ ವೆಂಕಟೇಶನೊಲುಮೆಯುಪ್ಪುದು,' ಅದೇ ಜೀವಿಗಳ ಪರಮೋದ್ದೇಶವಲ್ಲವೇ?

ಕೆ. ವೆಂಕಟರಾಯಾಚಾರ್ಯ, ಸುರತ್ಕಲ್ಲು.

ಅಭಿನಯಗೀತಗಳು

೧. ವಾದ್ಯಗಳು

ವೇಣೂರಿಂದ ವಾಣಿ ತಂದ ವೀಣೆ ಕಾಣಿರೋ ।
ಆಹಾ । ವೀಣೆ ಕಾಣಿರೋ । ಒಳ್ಳೆ । ವೀಣೆ ಕಾಣಿರೋ ।
ಜಾಣತನದಿ ಬಾರಿಸುವೆನು ! ಕಾಣಿಸುವುದುಲ್ಲಾಸಗಳನು ।
ಗಿಂ ಗಿಂ ಗಿಂ ಗಿಂ ಗೀಂ ಗೀಂ ।
ಗಿಂ ಗಿಂ ಗಿಂ ಗಿಂ ಗೀಂ ಗೀಂ ।
ಗಿಂ ಗಿಂ ಗಿಂ ಗಿಂ ಗೀಂ ಗೀಂ । ಗೀಂ ಗೀಂ ಗೀಂ ।೧॥

ಬೊಂಬಾಯಿಂದ ಶಂಭುತಂದ ತಂಬೂರಿ ನೋಡಿ ।
ಆಹಾ । ತಂಬೂರಿ ನೋಡಿ । ಒಳ್ಳೆ । ತಂಬೂರಿ ನೋಡಿ ।
ಗಂಭೀರದಲಿ ಬಾರಿಸುವೆನು । ತುಂಬ ಕೊಡಿಸಿ ಉಚಿತಗಳನು ।
ಬೊಂ ಬೊಂ ಬೊಂ ಬೊಂ ಬೋಂ ಬೋಂ ।
ಬೊಂ ಬೊಂ ಬೊಂ ಬೊಂ ಬೋಂ ಬೋಂ ।
ಬೊಂ ಬೊಂ ಬೊಂ ಬೊಂ ಬೋಂ ಬೋಂ । ಬೋಂ
ಬೋಂ ಬೋಂ ॥ ೨ ॥

ಬಾಳೂರಿಂದ ಕಾಳ ತಂದ ತಾಳ ಕಾಣಿರೋ !
ಸಣ್ಣ । ತಾಳ ಕಾಣಿರೋ । ಒಳ್ಳೆ । ತಾಳ ಕಾಣಿರೋ ।
ತಾಳರಿದರ ಹೊಡೆವೆನೀಗ । ಕೇಳಿ ಕೊಡಿಸಿರುಚಿತ ಬೇಗ ।
ಕ್ಣಿಂ ಕ್ಣಿಂ ಕ್ಣಿಂ ಕ್ಣಿಂ ಕ್ಣೀಂ ಕ್ಣೀಂ ।
ಕ್ಣಿಂ ಕ್ಣಿಂ ಕ್ಣಿಂ ಕ್ಣಿಂ ಕ್ಣೀಂ ಕ್ಣೀಂ ।
ಕ್ಣಿಂ ಕ್ಣಿಂ ಕ್ಣಿಂ ಕ್ಣಿಂ ಕ್ಣೀಂ ಕ್ಣೀಂ । ಕ್ಣೀಂ ಕ್ಣೀಂ ಕ್ಣೀಂ ।೩॥

ಪುತ್ತೂರಿಂದ ಮುತ್ತ ತಂದ ತುತ್ತೂರಿ ನೋಡಿ ।
ಆಹಾ । ತುತ್ತೂರಿ ನೋಡಿ । ಒಳ್ಳೆ । ತುತ್ತೂರಿ ನೋಡಿ ।
ಒತ್ತಿ ಪಿಡಿಯುತ್ತಿದೆ ಹರುಷ । ಸುತ್ತುತಿಹುದರುವತ್ತು ವರುಷ ।

ತ್ರ್ರಿ ತ್ರ್ರಿ ತ್ರ್ರಿ ತ್ರ್ರಿ ತೂ ತೂ।
ತ್ರ್ರಿ ತ್ರ್ರಿ ತ್ರ್ರಿ ತ್ರ್ರಿ ತೂ ತೂ।
ತ್ರ್ರಿ ತ್ರ್ರಿ ತ್ರ್ರಿ ತ್ರ್ರಿ ತೂ ತೂ। ತೂ ತೂ ತೂ ॥ ೪ ॥

ಲಂಕೆಯಿಂದ ಸಂಕು ತಂದ ಶಂಖ ಕಾಣಿರೋ।
ಆಹಾ। ಶಂಖ ಕಾಣಿರೋ। ಒಳ್ಳೆ ಶಂಖ ಕಾಣಿರೋ।
ಭೂಂಕಾರವ ಗೈವೆವಿದರ। ಲಂಕಾರವು ಬಹಳ ಮಧುರ।
ಭುಂ ಭುಂ ಭುಂ ಭುಂ ಭೂಂ ಭೂಂ।
ಭುಂ ಭುಂ ಭುಂ ಭುಂ ಭೂಂ ಭೂಂ।
ಭುಂ ಭುಂ ಭುಂ ಭುಂ ಭೂಂ ಭೂಂ। ಭೂಂ ಭೂಂ ಭೂಂ ॥೫॥

ಗುಂಟೂರಿಂದ ಬಂಟ ತಂದ ಗಂಟೆ ಕಾಣಿರೋ।
ಆಹಾ। ಗಂಟೆ ಕಾಣಿರೋ। ಒಳ್ಳೆ। ಗಂಟೆ ಕಾಣಿರೋ।
ಠಣ್ ಠಣ್ಣೆನ್ನುತ ಬಾರಿಸುವೆನು। ಉಂಟುಮಾಡುವುದಚ್ಚರಿಯನು।
ಠಣ್ ಠಣ್ ಠಣ್ ಠಣ್ ಠಾಂ ಠಾಂ।
ಠಣ್ ಠಣ್ ಠಣ್ ಠಣ್ ಠಾಂ ಠಾಂ।
ಠಣ್ ಠಣ್ ಠಣ್ ಠಣ್ ಠಾಂ ಠಾಂ। ಠಾಂ ಠಾಂ ಠಾಂ ॥ ೬ ॥

ಆಲೂರಿಂದ ಬೀಲ ತಂದ ದೋಲ ನೋಡಿರಿ।
ದೊಡ್ಡ 1 ದೋಲ ನೋಡಿರಿ। ಒಳ್ಳೆ। ದೋಲ ನೋಡಿರಿ।
ಮೇಲಿನುಚಿತ ಪಡೆಯಲೆಂದು। ಕೋಲಿನವರ ಹೊಡೆವೆವೆಂದು।
ಢಂ ಢಂ ಢಂ ಢಂ ಢಾಂ ಢಾಂ।
ಢಂ ಢಂ ಢಂ ಢಂ ಢಾಂ ಢಾಂ।
ಢಂ ಢಂ ಢಂ ಢಂ ಢ ಂ ಢಾಂ। ಢಾಂ ಢಾಂ ಢಾಂ ॥ ೭ ॥

ಸಿದ್ದೂರಿಂದ ಪುದ್ದು ತಂದ ಮದ್ದಳೆ ನೋಡಿ।
ಆಹಾ। ಮದ್ದಳೆ ನೋಡಿ। ಒಳ್ಳೆ। ಮದ್ದಳೆ ನೋಡಿ।
ಸದ್ದುಮಾಡದೆದ್ದು ನಿಂದು। ಬದ್ಧವಾಗಿ ಹೊಡೆವೆವೆಂದು।
ತದ್ದಿೀಂ ಕಿಟ ತಕ ತರಿಕಿಟ ತಾಂ।
ತದ್ದೀಂ ಕಿಟ ತಕ ತರಿಕಿಟ ತಾಂ।
ತದ್ದೀಂ ಕಿಟ ತಕ ತರಿಕಿಟ ತಾಂ। ತಾಂ ಧೀಂ ತಾಂ ॥ ೮ ॥

(ವಿ. ಸೂ.: ವೀಣೆ, ತಂಬೂರಿ, ತಾಳ, ತುತ್ತೂರಿ, ಶಂಖ, ಗಂಟೆ, ಡೋಲು, ಮದ್ದಳೆಗಳೆಂಬ ನಮ್ಮ ಜನರಲ್ಲಿ ಬಳಕೆಯಿರುವ ವಾದ್ಯಗಳ ಸ್ವರಗಳನ್ನು ಆಯಾ ಸೊಲ್ಲಿನ ಕೊನೆಗೆ ಮೂರು ಮೂರು ಬಾರಿ ಹೇಳುತ್ತಾ, ಕೊನೆಗೆ ಮೆಲ್ಲನೆ ಬಾರಿಸುವಂತೆ ಉದ್ದನೆ ಹೇಳಿದ್ದು ಉಚಿತವದೆ! ಇಂತಹ ವಾದ್ಯಾನುಕರಣ ಸ್ವರಗಳನ್ನು ಮಕ್ಕಳು ಗಟ್ಟಿಯಾಗಿ ಹೇಳುವುದರಿಂದ ಆಯಾ ಅಕ್ಷರಗಳ ಸ್ಪಷ್ಟೋಚ್ಚಾರಕ್ಕೆ ಅನುವಾಗುತ್ತದೆ. ಮೊದಲ ದರ್ಜೆಗಳ ಮಕ್ಕಳಲ್ಲಿರುವ ತೊದಲ್ನುಡಿ, ಅಸ್ಪಷ್ಟಾಕ್ಷರಾದಿ ದೋಷಗಳನ್ನು ನಿವಾರಿಸಲು ಈ ಸ್ವರಗಳು ಸಹಾಯಕವಾಗಿವೆ. ಈ ಪದ್ಯವು ಸುರತ್ಕಲ್ಲ 'ಕಲಾರಂಗ'ದ ಹಸ್ತಪತ್ರಿಕೆ [ಇ. 1950ರ ಪ್ರತಿ]ಯಿಂದ ಆಯ್ದುಕೊಳ್ಳಲಾಗಿದೆ.)

೨. ಹಕ್ಕಿಯೂ ಬಾಲಕನೂ

ಬಾಲಕ: ಹಕ್ಕಿಯೆ ಬಾರೆನ್ನ । ಪಕ್ಕದೊಳಿರು ಎನ್ನ ।
ಅಕ್ಕಾ ಎನುತ ಕರೆವೆ ।
ಚಿಕ್ಕ ಕಾಳುಗಳನು ।ಹೆಕ್ಕಿ ತರುತ ನಾನು ।
ಕೊಕ್ಕಿನೊಳಿಡುತಿರುವೆ ॥ ೧ ॥

ಹಕ್ಕಿ: ಬಾಲನೆ ನೀನಿಂದು । ಕಾಳುಗಳನೆ ತಂದು ।
ಪಾಲಿಸಬೇಕೇ ಎನ್ನ ॥
ಮೇಲಾದ ಹೊಲದೊಳು । ಜೋಲಾಡುತವುಗಳು ।
ಸಾಲಾಗಿರುವವು ಮುನ್ನ ॥ ೨ ॥

ಬಾಲಕ: ಬೇಕಾದ ಕಾಳುಗ । ಳಾ ಕಡೆಯಿರುತಿರೆ ।
ನೀ ಕಡ್ಡಿಗಳನೆ ತಂದು ॥
ಯಾಕೆ ಬಾಯೊಳಿಟ್ಟು । ಜೋಕೆಯ ಮಾಡುವೆ ।
ಹಾಕದ ಕೆಳಗೆ ಇಂದು ॥ ೩ ॥

ಹಕ್ಕಿ: ಚಿಣ್ಣನೆ ಕಡ್ಡಿಯ । ತಿನ್ನುವಳಲ್ಲ ನಾ ।
ನೆನ್ನಯ ಕೆಲಸ ನೋಡು ॥
ಉಣ್ಣೆಯ ಹತ್ತಿಯ । ನುಣ್ಣಗೆ ಹಾಸಿಗೆ ।
ಯನ್ನಿರಿಸಿದ ಚೆಲ್ವ ಗೂಡು ॥ ೪ ॥

ಬಾಲಕ: ಬೇಡ ನಿನಗೆ ಗೂಡು । ನೋಡಿಲ್ಲಿ ಮನೆಯನು ।
ಮಾಡಿ ಇಟ್ಟಿರುವೆನಲ್ಲ ।
ಓಡಿ ಬಂದೀಗಲೆ । ಕೂಡಲದನು ಕಂಡು ।
ನೀಡುವೆ ಕಾಳುಗಳ ॥ ೫ ॥

ಹಕ್ಕಿ: ಮಕ್ಕಳ ಬಳಿಗೆ ನಾ । ಫಕ್ಕನ ಬರೆ ಹಿಡಿ ।
ದಿಕ್ಕೃತ ಬಂಧನದಿ ॥
ತಿಕ್ಕಿ ಮುರಿವರೆನ್ನ । ಚಿಕ್ಕ ಗರಿಗಳನ್ನು ।
ಸಿಕ್ಕಿ ನಿನ್ನಾಧೀನದಿ ॥ ೬ ॥

ಬಾಲಕ: ಗಾಳಿ ಮಳೆಗೆ ಸಿಕ್ಕಿ । ಹಾಳಾಗಿ ಹೋಗದು ।
ಮೇಲಾದ ಪಂಜರವಲ್ಲೆ ॥
ವೇಳೆವೇಳೆಗೆ ನಿನ್ನ । ಪಾಲಿಸುವರ ಬಿಟ್ಟು ।
ಈಳೆಯೊಳ್ ನಿನಗಾರುಂಟೆ ॥ ೭ ॥

ಹಕ್ಕಿ: ಗಾಳಿಮಳೆಗೆ ಸಿಕ್ಕಿ । ಹಾಳಾಗುವೆನೆ ನಾನು ।
ಮೇಲೆ ದೇವರಿಲ್ಲೆ ॥
ವೇಳೆವೇಳೆಗೆ ಎನ್ನ । ಪಾಲಿಪನವನಂತೆ ।
ಈಳೆಯೊಳಿನಗಾರುಂಟೆ ॥ ೮ ॥

ಬಾಲಕ: ಆಡಲಿಕಲ್ಲದೆ । ಕೇಡಮಾಡಲು ನಿನ್ನ ।
ಕಾಡುವುದಲ್ಲ ನಾನು ॥
ಬೇಡುವೆ ನಿನ್ನನು । ಮಾಡುತ್ತ ದಯವನು ।
ಕೂಡು ಬಂದಿಲ್ಲಿ ನೀನು ॥ ೯ ॥

ಹಕ್ಕಿ: ಚಿಕ್ಕನಾಟವು ಇಲಿ । ಗಕ್ಕರವಪ್ಪುದೆ ।
ಚಿಕ್ಕವ ತಿಳಿದು ನೋಡು ।
ಹಕ್ಕಿಯಾದರು ನಾನು । ಚೊಕ್ಕ ಬುದ್ಧಿಯೊಳಿಹೆ ।
ಸಿಕ್ಕೆನು ವಿಜಯ ಮಾಡು ॥ ೧೦ ॥

ಬಾಲಕ: ಬಾರೆನೆಂದರೆ ಮರ । ನೇರಿ ಹಿಡಿದು ನಿನ್ನ ।
ಘೋರನೆಳೆದು ತಂದು ॥
ತೋರುವ ಬೋನಿನೊಳ್ । ಪಿಡಿದು ಹೊಗಿಸಲು ನಾ ।
ದೂರುವೆ ಯಾರ ಮುಂದು ॥ ೧೧ ॥

ಹಕ್ಕಿ: ಮರುಳು ಬಾಲನೆ ನೀನು । ಮರವೇರುವನಕ ನಾ ।
ಬರಿದೆ ಕೂತಿಹೆನೆ ನೋಡು ॥
ಅರಳಿಸಿ ಗರಿಗಳ । ತೆರಳುವ ಪರಿಗಳ ।
ನರಿತು ನೀ ಮನೆಗೋಡು ॥ ೧೨ ॥

(ವಿ ಸೂ: 1925 ಇಸ್ವಿ ನವಂಬರ ತಿಂಗಳ 'ಸಹಕಾರಿ' ಪತ್ರಿಕೆಯಲ್ಲಿ 'Hail bird, Sweet bird' ಎಂಬ ಆಂಗ್ಲ ಹೆಸರುಳ್ಳದ್ದಾಗಿ ಈ ಕೃತಿ ಪ್ರಕಟವಾಗಿದೆ. ಮಕ್ಕಳಲ್ಲಿ ಒಬ್ಬನು ಬಾಲಕನಾಗಿಯೂ, ಇನ್ನೊಬ್ಬನು ಹಕ್ಕಿಯಾಗಿಯೂ ಸಂಭಾಷಣಾರೂಪದಲ್ಲಿ ಹಾಡುವಂತೆ ಹೆಣೆದ ಈ ಪದ್ಯ ರಮ್ಯವಾಗಿದೆ. ಇಲ್ಲಿನ ಪದ್ಯದ ಸವಿನುಡಿಗಳಲ್ಲಿ ಅಡಗಿದ 'ದೇವರಿಲ್ಲೆ?' ಮತ್ತು 'ಚೊಕ್ಕ ಬುದ್ಧಿ' ಹಾಗೂ 'ಮರುಳು ಬಾಲ'ನೆಂಬೀ ನೀತಿಗಳನ್ನು ವಿವರಿಸಿ ಹೇಳುವುದರಿಂದ ತುಂಬಾ ಪ್ರಯೋಜನವಿದೆ.)

೩. ಒಂಟಿಕಾಲಿನ ಮೇಜು

ಅಯ್ಯಾ ಲಾಲಿಸಿ । ವೈಯಾಲಸ್ಯಕೆ । ವೈಯಾರದಿ ಪಾಡಿ ॥
ಸೈಯೆನಿಪಾಟವ । ಗೈಯುವೆವಾಜ್ಞೆಯು । ನೊಯ್ಯನೆ ದಯಮಾಡಿ ॥ ೧ ॥
ನೋಡಿರಿಯೆಮ್ಮೊಡ । ನಾಡಲಿಕಿರುವುದು । ಜೋಡಿನೆರಡೆ ಕೋಲು ॥
ಕೂಡಿಸುತಿವುಗಳ । ಮಾಡುವೆವಧಿಕದ । ರೂಢಿಯೊಳಿಹ ಮ್ಹಾಲು ॥ ೨ ॥
ಒಂದನು ನೀಟದೊ । ಳಿಂದಿರಿಸುತ ಬಳಿ । ಕೊಂದನದರ ತಲೆಗೆ ॥
ಸಂದಿಸಲಡ್ಡದಿ ಬಂದಪುದೈ ಕಾ । ಲೊಂದರ ಮೇಜಿಳೆಗೆ ॥ ೩ ॥
ಹರುಷದಿ ಕಾಗದ । ವಿರಿಸುತದರ ಮೇಲ್ । ಬರೆಯುತಿಹಲಿಕಹುದು ॥
ಸರಸದ ಸಭೆಯೊಳು । ಪರಿಮಳದೊಡವೆಗ । ಳಿರಿಸಲಿಕಾಗುವುದು ॥ ೪ ॥
ಒಂದೇ ಕಾಲಾ । ಯ್ತೆಂದೇನ್ ಮನದಲಿ । ಸಂದೇಹವೆ ನಿಮಗೆ ॥
ಸಂದಿಸೆ ಕಾಲಿ । ನ್ನೊಂದನು ಬೀಳ್ವುದು । ತೊಂದರೆಯುದು ಕೊನೆಗೆ ॥ ೫ ॥
ಇದ್ದುದರೊಳೆ ನೀ । ಪೊದ್ದಲು ತೃಪ್ತಿಯು । ಶುದ್ಧಮನವು ಬಹುದು ॥
ಸಿದ್ಧಿಸುವುದು ಸಭೆ । ಮಧ್ಯಸ್ಥಾನವು । ಬದ್ಧವಿದರಿಹುದು ॥ ೬ ॥

(ವಿ. ಸೂ: ಸರಕಾರೀ ತರಬೇತಿ ಶಾಲೆಯು ಪ್ರದರ್ಶನಕ್ಕಾಗಿ ಹಲವಾರು ಅಧ್ಯಾಪಕರ ನಾನಾವಿಧದ ಕೃತಿಗಳು ಕಳುಹಲಾಗಿತ್ತೆಂದೂ, ಅಂತಹವುಗಳಲ್ಲಿ ಶ್ರೀಯುತರ ಈ ಕೃತಿಗಳಲ್ಲಿ ಕೆಲವು ಸೇರಿತ್ತೆಂದೂ ಕೇಳುತ್ತೇವೆ.

ಎರಡು ಕೋಲುಗಳಿಂದಲೇ ಒಂದು ಮೇಜಿನ ಆಕೃತಿಯು ರಚನೆಯಾಗುವು
ದನ್ನು ಇಲ್ಲಿ ಸರಸವಾಗಿ ಹೇಳಿದೆ. ಈ ಕೊನೆಗೆ ಹೇಳಿದ 'ಇದ್ದುದರೊಳೆ
ತೃಪ್ತಿ' ಬೇಕೆಂದು—ಲೇಸೆಂದು ಬಾಲಕರಲ್ಲಿ ನೆಲೆಯೂರಲು ಇದು ಸಹಕಾರಿ
ಯಾಗಿದೆ.)

೪. ಕಾಗದದ ಆಕೃತಿಗಳು

ಆಟವಾಡುವ । ಕಾಗದ । ದಾಟವಾಡುವ ॥ ಪ. ॥
ನೋಟಕಧಿಕದ । ಮಾಟೆನಿಸುವಂ । ತಾಟವಾಡುವ ॥ ಅ. ಪ. ॥
ಒಂದು ಭಾಗವನು । ತೆಗೆದಿ । ನ್ನೊಂದು ಬದಿಗದನು ॥
ತಂದಿಡಲು ಬಲು । ಚೆಂದ ಪುಸ್ತಕ । ದಂದವಾಯ್ತಿನ್ನು ॥ ೧ ॥
ಮತ್ತದನೆ ತಡೆದು । ಮಡಚುತ । ಲೊತ್ತಲದ ಪಿಡಿದು ॥
ನಿತ್ಯದಲಿ ಬರೆ । ಯುತ್ತಿರುವ ಶ । ಬ್ದಾರ್ಥ ಬುಕ್ಕಹುದು ॥ ೨ ॥
ನೋಡಿರಚ್ಚರಿಯಾ । ನಾವಿಂ । ದಾಡುವ ಪರಿಯ ॥
ಕೂಡೆ ಬೋಳಲ । ಮಾಡೆ ಬಹ ಮನೆ । ಮಾಡಿನಾಕೃತಿಯಾ ॥ ೩ ॥
ಮತ್ತದರ ತುದಿಯಾ । ಮೂಲೆಯು । ನೆತ್ತಿ ನಡುಗಡೆಯು ॥
ಹತ್ತಿರದೊಳಿಡ । ಲುತ್ತಮದ ಹಾ । ಯೆತ್ತುವಾ ಸ್ಥಿತಿಯಾ ॥ ೪ ॥
ನೋಡಿರಿನ್ನೊಂದು । ತುದಿಯನು । ಕೂಡಿಸಲು ತಂದು ॥
ನಾಡ ಬಡವರು । ಮಾಡಿಕೊಳ್ಳುವ । ಗೂಡಿನ ಗೊರಗು ॥ ೫ ॥
ಮೂರನೆಯ ಭಾಗ । ವಿಂಗಡ । ಮಾರಿಸಲಿಕಾಗ ॥
ಭೋರನೆ ಮೇ । ಲೇರಿ ಮೂಲೆಯು । ನೋರೆ ಗೈ ಬೇಗ ॥ ೬ ॥
ಟೊಪ್ಪಿಯಾಯ್ತಲ್ಲ । ಬೇಕೆನ । ಲೊಪ್ಪಿಸುವೆವಲ್ಲ ॥
ತಪ್ಪದಿದ ಕಿರು । ತಿಪ್ಪ ಬೆಲೆಯು । ನ್ನಪ್ಪಣೆಯ ನೀಡಿ ॥ ೭ ॥
ಟೊಪ್ಪಿಯಾ ನಡುವ । ಕೈಯೊಳ । ಗೊಪ್ಪುತೆಳೆದಿಡುವ ॥
ಬಪ್ಪುದೈ ಮೇ । ಲಿಪ್ಪ ಹವೆಗೈ । ತಪ್ಪ ಗಾಳಿಪಟ ॥ ೮ ॥
ಪಕ್ಕಗಳ ಬುಡದ । ಮೇಲ । ಕೈಕೈ ವಿಂಗಡದಿ ॥
ಚಿಕ್ಕವರ ಮನ । ದಕ್ಕರದ ಬಲು । ಚೊಕ್ಕಟದ ಟೋಪಿ ॥ ೯ ॥
ಮುನ್ನಿನಂದದಲಿ । ಮಧ್ಯವ । ನಿನ್ನು ಸೆಳೆಯುತಲಿ ॥
ಮಣ್ಣನೆ ಬುಡ । ವನ್ನೆ ಮರಳಿಸಿ । ನುಣ್ಣನೊತ್ತುತಲಿ ॥ ೧೦ ॥

ಎತ್ತಿ ಬಳಿಕದರ । ಬುಡದೊಳ । ಗಿತ್ತು ನಡುಬೆರಳ ॥
ಸುತ್ತಣರುವಿನೊ । ಳೊತ್ತಿರುವ ಸೀಳ್ । ವುತ್ತೆಳೆಯೆ ಕೇಳಾ ॥೧೧॥
ಡೋಣೆಯಾಗುವುದೈ । ಜಲವಿಹ । ಠಾಣವಾವುದೈ ॥
ಗೇಣಿ ನೀರಿರೆ । ಜಾಣತನದೊಳೀ । ದೋಣಿ ನಡೆಸುವೆವೈ ॥ ೧೨ ॥
ನೀರು ತುಂಬಿರುವ । ದಾಟಲು । ತೀರದಂತಿರುವ ॥
ಭಾರಿ ಹೊಳೆಗಳ । ಪಾರಾಗಲಿಕಿದು । ದಾರಿಯೈ ಕೇಳಾ ॥ ೧೩ ॥
ಮಂಗಲಂ ಸದಾ । ವೃತ್ತಿಗೆ । ಮಂಗಲಪ್ರದ ॥
ಮಂಗಲಂ ಜಯ । ಮಂಗಲಂ ಶುಭ । ಮಂಗಳೆನ್ನಿರೈ ॥ ೧೪ ॥

(ವಿ. ಸೂ: ಒಂದು ಕಾಗದದಿಂದಲೇ ನಾನಾಕೃತಿಗಳನ್ನು ಹೆಣೆಯುತ್ತಾ ಹಾಡಲು ಅನುಕೂಲಿಸುವ ಪದ್ಯವಿದು. ನಾಲ್ಕಾರು ಮಕ್ಕಳು ನಿಂತು ವೃತ್ತಿಯ ಪಾಠದಲ್ಲಿ ಚಿಕ್ಕ ಕೈಗೆಲಸದ ಆಟಗಳನ್ನು ಮಾಡುವುದರಿಂದ ಪಾಠವು ಆಟದಂತೆ ಸಾಗಬೇಕೆಂಬ ಆಧುನಿಕ ಶಿಕ್ಷಣತತ್ವಕ್ಕೆ ತಕ್ಕಂತೆ ಈ ಪದ್ಯದಲ್ಲಿ ಒಮ್ಮೊಂದೊಮ್ಮೆಗೆ ಹಲವು ಬಗೆಗಳನ್ನು ತೋರಿಸುವ ಚಮತ್ಕೃತಿಯಿದೆ.)

೫. ಕೃಷಿಕನ ಆನಂದ (ಬೇಸಾಯದ ಫಲ)

ಮಾಡುವೆನು । ಹೊಲ । ಮಾಡುವೆನು ॥
ಜೋಡಿಸಿ ನೇಗಿಲ ಹೂಡುವೆನು ॥ ಪಲ್ಲ ॥
ಕೂಡಿಸಿರುವ ಗೊಬ್ಬರವನು ಹೊರುತ ।
ಲೋಡುವೆನು । ಚೆ । ಲ್ಯಾಡುವೆನು ॥ ಅ.ಪ. ॥
ಬೀಜವ ಬಿತ್ತುತ । ಬೇಲಿಯನೊತ್ತುತ ।
ಗೇಯುವೆನು । ನಾ । ಕಾಯುವೆನು ॥
ನೇಜಿಯ ತೆಗೆಸುತ । ನೇಗಿಲ ಹೊಡಿಸುತ ।
ನಡಿಸುವೆನು । ಕಾ । ಪಿಡಿಸುವೆನು ॥ ೧ ॥
ಬೆಳೆದಾ ಪೈರನು ಕೊಯ್ಯುತ ಸೂಡಿಯ ।
ಮಾಡುವೆನು । ಹೊ । ತ್ತೋಡುವೆನು ॥
ಕಳದೊಳಗಿಡುತಲಿ ಹೊಡೆಯುತ ಬತ್ತವ ।
ತೂರುವೆನು । ನಾ । ಕೇರುವೆನು ॥ ೨ ॥

ಮತ್ತದ ಕಣಜದಿ ಸೇರಿಸಿ ಹುಲ್ಲನು |
ಮೆಟ್ಟುವೆನು | ಮೇ | ಲೊಟ್ಟುವೆನು ||
ಬತ್ತವನಂತರ ನನೆಯಿಸಿ ಬೇಯಿಸಿ |
ತೆಗೆಯುವೆನು ಕಳ | ಕೊಗೆಯುವೆನು || ೩ ||
ಬಿಸಿಲಿನೊಳೊಣಗಿಸಿ ಗುಡಿಸುತ ಲೊರಳೊಳು |
ಸುರಿಸುವೆನು | ವಿಂಗೆ | ನುರಿಸುವೆನು ||
ಹಸನದಿ ತೂರುತ ತೊಳಸಿಯೆ ಕೇರುತ |
ಲಳಿಯುವೆನು | ಹಸಿವೆ | ಕಳಿಯುವೆನು || ೪ ||
ಕೇರಿಸಿದಕ್ಕಿಯು ಮುಡಿಮುಡಿಯಾಗಿಯೆ |
ಕಟ್ಟುವೆನು | ಬಳ | ಗೊಟ್ಟುವೆನು ||
ಕೋರಿದ ಬೆಲೆ ಬರೆ ಸಂತೋಷದಿ ನಾ |
ಮಾರುವೆನು | ಸುಖ | ವೇರುವೆನು || ೫ ||
ಹೀಗೆಲ್ಲರು ಬೇಸಾಯುದ ಕೆಲಸವ |
ಸಾಗಿಸಲಿ | ಸುಖ | ಭೋಗಿಸಲಿ ||
ಶ್ರೀಗುರುವೆಂಕಟ ಪತಿಯಾ ವಚನವ |
ಲಾಲಿಸಲಿ | ಜಯ ! ಪಾಲಿಸಲಿ || ೬ ||

(ವಿ. ಸೂ: ನಾಲ್ಕೆಂಟು ಮಕ್ಕಳು ಕೂಡಿ ಅಭಿನಯಿಸುತ್ತಾ ಹಾಡಲು ತಕ್ಕಂತೆ ಇರುವ ಈ ಪದ್ಯವು ಸುರತ್ಕಲ್ಲಿನ 'ಕಲಾರಂಗ'ದ ಹಸ್ತ ಪತ್ರಿಕೆಯಿಂದ ಆರಿಸಲಾಗಿದೆ. 'ದುಡಿಮೆಯ ಮೇಲಣ ಅಗೌರವ'ವನ್ನು ಹೋಗಲಾಡಿಸಲು ಇಂತಹ ಕೃತಿಗಳು ಸಹಾಯಕಗಳೆನ್ನಲಡ್ಡಿಯಿಲ್ಲ!)

೬. ಅಡುಗೆ ಕೆಲಸ

ಅಡುಗೆಮಾಡುವ | ನಾವು ಬೇಗ | ಅಡುಗೆಮಾಡುವ || ಪ. ||
ಅಡುಗೆಮಾಡುವುದಕ್ಕೆ ತಕ್ಕ | ಒಡವೆಗಳನು ತಂದು ಹತ್ತಿ |
ರಿಡುತ ಒಲೆಯ ಮೇಲೆಯೊಂದು | ಮಡಕೆಯಿಟ್ಟು ನೀರಹೊಯ್ದು || ೧ ||
ಮುಚ್ಚಳವನೆ ಹುಡುಕುತದಕೆ | ಮುಚ್ಚಿ ಬೆಂಕಿ ಕಡ್ಡಿ ಕೀರಿ |
ಹಚ್ಚಿ ದೀಪ ಮಾಡ್ಡಿ ಒಲೆಗೆ | ಕಿಚ್ಚ ಹಿಡಿಸತೊಡಗುತಿಂದು || ೨ ||
ಮಡಲಿನೆಸಳ ತೆಗೆಯುತದನು | ಮಡಚಿ ದೀಪವಿಟ್ಟು ಮತ್ತೆ |
ಹಿಡಿಯೆ ಬೆಂಕಿ ಸೊಲ್ಲನೊಲೆಸಿ | ಇಡುತಕಟ್ಟಿಗೆಗಳ ನೋಡಿ || ೩ ||

ಚಿಕ್ಕ ಕಟ್ಟಿಗೆಗಳ ಮೊದಲು । ಹೆಕ್ಕಿಯಿಡುತ ಓಟಿಯಿಂದ ।
ಘಕ್ಕನೂದಿಕೊಂಡು ಕಿಚ್ಚ । ತಕ್ಕ ಬಗೆಯೊಳುರಿಸಿಕೊಂಡು ॥ ೪ ॥
ಅಕ್ಕಿಯುಳಿದು ಬೇರೆ ಪಾತ್ರ । ಕಿಕ್ಕಿ ನೀರ ಹೊಯ್ದು ಮತ್ತೆ ।
ತಿಕ್ಕುತದರಕ್ಕಚ್ಚು ತೆಗೆದು । ಘಕ್ಕಘಕ್ಕನೆ ಕೈಯಲಾಡಿಸುತ ॥ ೫ ॥
ಚೊಕ್ಕವಾಗುವಂತಿನ್ನೊಮ್ಮೆ । ಇಕ್ಕಿ ನೀರ ಮೊದಲಿನಂತೆ ।
ತಿಕ್ಕಿ ಮೂರುಬಾರಿ ಹೀಗೆ । ಅಕ್ಕಚ್ಚನ್ನೆ ತೆಗೆಯುತಿಂದು ॥ ೬ ॥
ಅಕ್ಕಚ್ಚಿನ ಮಡಕೆ ಮೇಲೆ । ಕುಕ್ಕೆಯೊಂದನ್ನಿಟ್ಟು ತೊಳೆದ ।
ಅಕ್ಕಿಗೆರೆದು ತುಂಬ ನೀರ । ಚಿಕ್ಕ ಕರಟವನ್ನೆ ತೆಗೆದು ॥ ೭ ॥
ಅಕ್ಕಿಯಿರುವ ನೀರಿನೊಳಗೆ । ಇಕ್ಕಿ ಕರಟವನ್ನು ಮೆಲ್ಲ ।
ನಕ್ಕರದಲಿ ತಿರುಗಿಸ್ಯದಕೆ । ಸಿಕ್ಕುವಕ್ಕಿ ಕುಕ್ಕೆಗಿಕ್ಕಿ ॥ ೮ ॥
ಇನ್ನು ಬಾರದಿರುವ ಅಕ್ಕಿ । ಯನ್ನು ಕೈಯ ಹಾಕಿ ತೆಗೆದು ।
ಮುನ್ನಿನ ಕರಟಕ್ಕೆ ಯಿಕ್ಕಿ । ಚೆನ್ನಾಗದರನಡ್ಡರಿಸುತ ॥ ೯ ॥
ಮುಚ್ಚಳವನೆ ತೆಗೆದು ಒಲೆಯ । ಕಿಚ್ಚು ಕೈಗೆ ತಾಗದಂತೆ ।
ಎಚ್ಚರಿಕೆಯೊಳಂದು ತೊಳೆದ । ಸ್ವಚ್ಛದಕ್ಕಿಯಿಡುತ ನಾವು ॥ ೧೦ ॥
ತೆಗೆದು ಸಟ್ಟುಗವನು ಸುತ್ತ । ಮಗುಚಿ ಕೆಳಗಿಡುತ್ತ ಬೆಂಕಿ ।
ಧಗಧಗಿಸುವ ತೆರದಿ ಕಟ್ಟಿ । ಗೆಗಳನಿಟ್ಟು ಉರಿಸುತಿಂದು ॥ ೧೧ ॥
ಕುದಿಯು ಬರಲು ತೊಡಗೆ ನೋಡಿ । ಮುದದಿ ಸಟ್ಟುಗದಲಿ ಮಗುಚಿ ।
ಬವಲು ಕಟ್ಟಿಗೆಗಳನಿಡದೆ । ಹದದಿ ಬೆಂಕಿಯುರಿಯ ತಣಿಸಿ ॥ ೧೨ ॥
ಬೆಂದ ಹದವ ತಿಳಿಯುವುದಕೆ । ಮುಂದೆ ಸಟ್ಟುಗವನೆ ಹಾಕಿ ।
ಚೆಂದದಿಂದ ಮಗುಚಿ ತೆಗೆಯೆ । ಬಂದ ಅನ್ನವೊತ್ತಿ ನೋಡಿ ॥ ೧೩ ॥
ಮೆತ್ತಗಾಗಲನ್ನವನ್ನು । ಹೊತ್ತು ಕಳೆಯದಾಗ ಒಲೆಯ ।
ಹತ್ತಿರಿರುವ ಕಟ್ಟಿಗೆಗಳ । ನಿತ್ತ ಹೊರಗೆಯೆಳೆಯುತಿಟ್ಟು ॥ ೧೪ ॥
ಬಸಿಯಲೊಂದು ಪಾತ್ರೆಯನ್ನು । ಕಸವ ತೆಗೆಯುತೊಲೆಯ ಮುಂದೆ ।
ಹಸನವಾಗಿಯಿಡುತ ಬುಡಕೆ । ಹೊಸೆದು ಸಟ್ಟುಗವನೆಯಿಟ್ಟು ॥ ೧೫ ॥
ಬಿಸಿಯು ತಾಗದಂತೆ ಕಯ್ಗೆ । ಹೊಸತಾದೆಲೆಯ ಹಿಡಿದು ಅನ್ನ ।
ಬಸಿಯಲೊಂದು ಮುಚ್ಚಣಿಕೆಯ । ಹಸನವಾಗಿ ಮುಚ್ಚುತಿಂದು ॥ ೧೬ ॥
ಮೆಲ್ಲನೆದುರಿಗಿಟ್ಟ ಪಾತ್ರ । ದಲ್ಲಿ ತಿಳಿಯು ಬಿದ್ದು ಕೆಳಗೆ ।
ಚೆಲ್ಲದಂತೆ ಬಹಳ ಜತನ । ದಲ್ಲಿ ಬಗ್ಗಿ ಸುತ್ತಲಿಂದು ॥ ೧೭ ॥

ತಿಳಿಯು ಪೂರ್ಣವಿಳಿದು ಪೋಗೆ । ನಿಲದೆ ಅನ್ನಪಾತ್ರವನ್ನು ।
ನಲವಿನಿಂದ ನೆಟ್ಟಗಿರಿಸಿ । ಬಲದೊಳದರನಲ್ಲಾಡಿಸುತ ॥ ೧೮ ॥
ಇನ್ನು ಸ್ವಲ್ಪ ಸಮಯವದರ । ಮುನ್ನಿನಂತೆ ಒಲೆಯೊಳಿಟ್ಟು ।
ಸಣ್ಣ ಕೆಲಸವಿರಲು ಮಾಡಿ । ಉಣ್ಣಬಹುದು ಬಳಿಕ ನಾವು ॥ ೧೯ ॥
ಅನ್ನವನ್ನು ಮಾಳ್ಪ ರೀತಿ । ಯನ್ನು ವಿವರವಾಗಿ ತೋರ್ಪೆ ।
ಇನ್ನಿದರೊಳು ತಿಳಿಯದಿರ್ಪು । ದನ್ನು ಬೇಕಾದವರು ಕೇಳಿ ॥ ೨೦ ॥

(ವಿ.ಸೂ: 'ಗೃಹಿಣೀ ಗೃಹಮುಚ್ಯತೇ,' 'ಹೆಂಗೂಸೇ ಮನೆಯೆನ್ನಿಸಲ್ಪಡುವ'ಳೆಂಬ ಸೂಕ್ತಿಯಂತೆ, ದುಡಿದು ತಂದೊಟ್ಟಿದರೆ ಸಾಲದು, ಓರಣದಿಂದ ಅದನ್ನು ಬಳಸುವ ಚಾತುರ್ಯ ಹೆಮ್ಮಕ್ಕಳಿಗೆ ದೈವದತ್ತವರವಾಗಿದೆ. ಕೆಲವೊಮ್ಮೆ ಗಂಡುಸರೂ ಅಡುಗೆಯನ್ನು ಮಾಡುವುದಿದ್ದರೂ, ಹೆಂಗಳಿಗೆ ಅಡುಗೆಯ ಚುರುಕು ಸಹಜವಾದುದೆನ್ನಬಹುದು. ಚಿಕ್ಕ ಮಕ್ಕಳು—ಅನುಕರಣಮಾಡುವ ಆಟಗಳಲ್ಲಿ ಅಡುಗೆಯ ಕೆಲಸವೂ ಒಂದಾಗಿದೆ. ಇಲ್ಲಿ ಪ್ರಾದೇಶಿಕ ಶಬ್ದಗಳಾಗಿ ಕೆರಟೆ (ಗೆರಟೆ), ತಿಳಿ (ಗಂಜಿಯ ನೀರು) ಇತ್ಯಾದಿಗಳನ್ನು ಕಾಣುತ್ತೇವೆ. ಈ ಪ್ರಭಾತ ಪ್ರಕಟನೆಯಾದ 'ಸುವಾಸಿನಿ' (ಇಸ್ವಿ 1950) ವಾರಪತ್ರಿಕೆಯಲ್ಲಿ 'ಹೆಂಗಳ ಅಂಗೈಗನ್ನಡಿ'ಯೆಂಬುದು—ಇವರ ಕೃತಿಯೊಂದು—ಪ್ರಕಟವಾಗಿತ್ತು. ಅದರಲ್ಲಿ ಅನ್ನ ಮೊದಲಾದ ಹಲವು ಅಡುಗೆಗಳ ಕ್ರಮ ಹೇಳಲಾಗಿದೆ.)

೭. ಜಡೆ ಹೆಣೆಯುವುದು

ಜಡೆ ಹೆಣೆಯುವ ನಾವಡಿಗಡಿಗೆ ।
ಹುಡುಗರು ಬಳಿಕೊಡಗೂಡಿ ಮಿಗೆ ॥
(ಹುಡುಗಿಯರಿಂದೊಡಗೂಡಿ ಮಿಗೆ ।)
ತಡೆಯದನುಜ್ಞೆಯ ಪಡೆಯುತಲಿ ।
ಗಡಿಬಿಡಿಯಾಗದೆ ನಡೆಯುತಲಿ ॥ ೧ ॥
ತೋರುವ ಹಗ್ಗವ ಜಾರಿಸುತ ।
ಓರುವೆರೊಂಡೊಂದಾರಿಸುತ ॥
ಮೂರು ವಿಭಾಗದೊಳೋರಂತೆ ।
ಸಾರುವ ಮುಂದಕೆ ತೇರಂತೆ ॥ ೨ ॥

ಎಂಟನೆಯಂಕೆಯು ನೆನಪಿಡುತ ।
ತಂಟೆಗಳಿಲ್ಲದೆ ಅಡಿಯಿಡುತ ॥
ಗಂಟೆನೊಳ್ಳೈದುವ ಸಮಯದಲಿ ।
ಒಂಟಿಯಾಗದೆ ನಡು ಪಿಡಿಯುತಲಿ ॥ ೩ ॥
ನಡಿ ನಡಿ ನಡಿ ನಡಿ ನಡಿರೆನುತ ।
ದಡ ಡಡ ದಡ ದಡ ನಡಿಯಿಡುತ ॥
ಕಡೆಗಿಡೆ ಬಿಡದೆಡೆ ಜಡೆಗೂಡಿ ।
ತಡಿ ತಡಿ ತಡಿರೆಂದೆಡೆ ಮಾಡಿ ॥ ೪ ॥
ಅಲ್ಲಲ್ಲೆಲ್ಲರು ನಿಲ್ಲುತಲಿ ।
ಮೆಲ್ಲನೆ ಹಿಂದಕೆ ತಿರುಗುತಲಿ ॥
ತಲ್ಲಣಿಸದೆ ಮೊದಲಿನ ತೆರದಿ ।
ನಿಲ್ಲದೆ ನಡೆಯಿರಿ ಬಲು ಭರದಿ ॥ ೫ ॥
ಸರಿಯಿರಿ ಸರಿಯಿರಿ ಸರಿರೆನುತ ।
ದರದರ ದರದರ ದರರೆನುತ ॥
ಸರಿ ಸರಿ ಸರಿಯೆಂಬಂದದಲಿ ।
ಸರ ಸರ ಸರ ಮುಂದರಿಯುತಲಿ ॥ ೬ ॥
ಜೋರಿನೊಳ್ಳೈದಲು ಬಳಿಕಾಗ ।
ಘೋರನೆ ಜಡೆ ಬಿಡೆ ಬಲು ಬೇಗ ॥
ಸಾರದೆ ನಿಲ್ಲುತ ಅಲ್ಲಲ್ಲಿ ।
ತೋರುವ ವಂದನೆ ನಿಂತಲ್ಲಿ ॥ ೭ ॥
ಸಾಕೆನಲಪ್ಪಣೆಯೆನುತತ್ತ ।
ಹಾಕುತ ಹಗ್ಗವ ತೆರಳುತ್ತ ॥
ಜೋಕೆಯೊಳ್ಳೈದುವ ಕಾಲ್ಮಣೆಗೆ ।
ಬಾಕಿಯು ಪಾಠವೆಸಗಿ ಕೊನೆಗೆ ॥ ೮ ॥
ವೆಂಕಟರಮಣನ ಕೃತಿಯೆನುತ ।
ಶಂಕಿಸದೆಯೆ ಹರುಷವ ಬಡುತ ॥
ಬಿಂಕವ ಕಾಣಿಸದ್ಧಿರಿಯರಿಗೆ ।
ಕಿಂಕರರಾಗಿರಿ ಗುರುಗಳಿಗೆ ॥ ೯ ॥

(ವಿ.ಸೂ: ಮಾಡಿನ ಅಡ್ಡ ಅಥವಾ ಅಡ್ಡವಿಟ್ಟ ತೊಲೆಗಳಿಗೆ ಹಗ್ಗಗಳನ್ನು ಕಟ್ಟಿ ಜೋಲುಬಿಡುವುದು, ಅದರ ಒಂದೊಂದು ತುದಿಯನ್ನು ಹಿಡಿದು ಈ ಪದ್ಯದೊಂದಿಗೆ ಜಡೆ ಹೆಣೆಯುವುದನ್ನು ಕಂಡರೆ, ಅದೆಷ್ಟು ಆನಂದ! ಇಲ್ಲಿನ ನಡೆಯೆಂದರೆ 8 ಎಂಬ ಅಂಕೆಯಂತಿದೆ. ಹಳೆಯ ಸಾಲೆಗಳಲ್ಲಿ ಕಾಲ್ಮಣೆಯಲ್ಲಿ ಮಕ್ಕಳು ಕೂರುತ್ತಿದ್ದರು! ಇದರಂತೆ, ಶಾಲೆಯ ಶಿಕ್ಷೆಗಳಲ್ಲಿ 'ಪರಂಗಿಮಂಚ'ವಿತ್ತೆಂದು 'ಪ್ರಹ್ಲಾದ ಚರಿತೆ'ಯಲ್ಲಿದೆ. ಇಲ್ಲಿ ಕೊನೆಯದಾಗಿ 'ಬಿಂಕವ ಕಾಣಿಸದೆ— ಕಿಂಕರರಾಗಿರಿ' ಎಂಬ ಉಪದೇಶವೂ ಕೂಡಿಬಿಲುವಾಗಿದೆ!)

೮. ಬಲೆ ಹೆಣೆಯುವುದು

ಬಲೆಯ ಹೆಣೆವ ನಾವು ಬೇಗ | ನಲವಿನಿಂದಲಿ ||
ಚೆಲುವ ಸಿಗರಿ ಹಗದಿ ಪಿಡಿದು | ಗೆಲವಿನಿಂದಲಿ || ಪ ||
ಸಿಗರಿಯಿಂದ ನೂಲನೆಡೆಗೆ | ಹೊಗಿಸಲಪ್ಪುದು ||
ಹಗದಿಯಿಂದ ಬಲೆಯ ಕಣ್ಣು | ನಗಲ ಬಪ್ಪುದು || ೧ ||
ಒಂದು ಮೊಳದ ನೂಲ ತುದಿಗ | ಳಿಂದ ಕೂಡಿಸಿ ||
ಸಂದಿನೊಳಗೆ ಗಂಟನಿಕ್ಕು | ತಿಂದು ಜೋಡಿಸಿ || ೨ ||
ಮಾಲೆಯಾಗಲದರ ಕೂತು | ಕಾಲ ಬೆರಳಿಗೆ ||
ಲೀಲೆಯಿಂದ ಸಿಕ್ಕಿಸುತ್ತ | ಮೇಲೆ ಸಿಗರಿಗೆ || ೩ ||
ಸುತ್ತಿಯಿರುವ ನೂಲ ತುದಿಯ | ಮತ್ತೆ ಬಿಡಿಸುತ ||
ಎತ್ತಿ ಮಾಲೆಯೊಳಗೆ ಹೊಗಿಸಿ | ಹತ್ತಿರೆಳೆಯುತ || ೪ ||
ಮೇಲಿನಿಂದಲಿರುವ ಬುಡದ | ನೂಲ ಕೂಡಿಸಿ ||
ಲೀಲೆಯಿಂದ ನಾಲ್ಕು ಬೆರಳ | ಮಾಲೆ ಮಾಡಿಸಿ || ೫ ||
ಒಂದು ಗಂಟ ಹಾಕಿ ಬಳಿಕ | ಸಂದ ಪಿಡಿದದ ||
ಮುಂದೆ ಸಿಗರಿಯೆಡದಿ ಬಲಕೆ | ತಂದು ಮತ್ತದ || ೬ ||
ಬುಡದಿ ನೂಲಿನೆಡಕೆ ತಂದು | ಒಡನೆ ಮೇಲಕೆ ||
ತಡೆಯದೆಳೆಯೆ ಗಂಟು ಬೀಳೆ | ಬಿಡದೆ ಸರಿಸಕೆ || ೭ ||
ಪಿಡಿದು ನೂಲ ಕೆಳಗೆ ಗಂಟ | ಬುಡದಿ ಹಗದಿಯ ||
ಒಡನೆ ಪೊತ್ತುತಿಟ್ಟು ಬಳಿಕ | ಬಿಡದೆ ಸಿಗರಿಯ || ೮ ||

ಬುಡದಿ ದೊಡ್ಡ ಮಾಲೆಯೊಳಗೆ । ನಡುವೆ ಹೊಗಿಸುತ ॥
ಒಡನೆ ಹಗದಿ ಮೇಲೆ ಬೆರಳಿ । ನೆಡೆಯೊಳಿಕ್ಕುತ ॥ ೯ ॥
ಎತ್ತಿ ಸಿಗರಿಯನ್ನೆ ಎಡಕೆ । ಒತ್ತಿ ಬಲಗಡೆ ॥
ಮತ್ತೆ ಬುಡದೊಳೆರಡು ನೂಲಿ । ನೊತ್ತಿಲೊಳಗಡೆ ॥ ೧೦ ॥
ತಂದು ಮೇಲಕೆಳೆಯೆ ಗಂಟು । ಬಂದು ಬೀಳ್ವುದು ॥
ಚೆಂದದೊಂದು ಕಣ್ಣೆ ಆಯಿ । ತೆಂದು ತಿಳಿವುದು ॥ ೧೧ ॥
ಬಳಿಕ ಸಿಗರಿ ದೊಡ್ಡಮಾಲೆ । ಯೊಳಗೆ ಬುಡದೊಳು ॥
ಸಿಲದೆ ಹೊಗಿಸಿ ಮೊದಲಿನಂತೆ । ಯೆಳೆದು ಮುದದೊಳು ॥ ೧೨ ॥
ಬೆರಳ ಬುಡದಿ ಹಗದಿ ಮೇಲೆ । ಯಿರಿಸಿ ಸಿಗರಿಯ ॥
ತಿರುಗಿಸುತ್ತಲೆಡದಿ ಬುಡಕೆ ॥ ತರುತ ಹಗದಿಯ ॥ ೧೩ ।
ಎದುರಿನಿಂದಲೆರಡು ನೂಲ । ಬದಿಯೊಳೊಳಗಡೆ ॥
ಮೊದಲಿನಂತೆ ಹೊಗಿಸಿ ಎಳೆಯೆ । ಮುದದಿ ಮೇಲ್ಗಡೆ । ೧೪ ॥
ಬಂತು ಎರಡನೆಯ ಕಣ್ಣು । ಸಂತತಾ ಇದೇ ॥
ಗೊಂತ ಹಿಡಿದು ಮಾಡಿ ಬಲೆಯ । ಅಂತರಾ ಇದೇ ॥ ೧೫ ॥
ಹೀಗೆ ಅಗಲ ಸಾಕೆನುತ್ತ । ಲಾಗೆ ಹಗದಿಯ ॥
ಬೇಗ ಜಾರಿಸುತ್ತ ಬಲೆಯ । ನಾಗ ಸಿಗರಿಯ ॥ ೧೬ ॥
ನೂಲ ತುದಿಯು ಯಿಪ್ಪ ಕಣ್ಣ । ಸಾಲನೆಡಗಡೆ ॥
ಬೀಳುವಂತೆ ಮಗುಚಿ ಬೇರೆ । ಸಾಲ ಕೆಳಗಡೆ ॥ ೧೭ ॥
ಉಂಟುಮಾಡಿ ದೊಡ್ಡಮಾಲೆ । ತಂಟೆಗ್ಹೋಗದೆ ॥
ಗಂಟುಮಾಡಿ ಮೊದಲ ಸಾಲ । ತುಂಟರಾಗದೆ ॥ ೧೮ ॥
ಹೀಗೆ ಹೆಣೆಯೆ ಬಲೆಯು ಮುಂಚೆ । ಸಾಗಿ ಬಪ್ಪುದು ॥
ಶ್ರೀ ಗಿರೀಶ ವೆಂಕಟೇಶ । ನೊಲುಮೆಯುಪ್ಪುದು ॥ ೧೯ ॥

(ವಿ. ಸೂ: ಬಲೆಯನ್ನು ಹೆಣೆವಾಗ ಹಾಡುವಂತೆಯೂ, ಅದರ ಕ್ರಮಗಳು ತಿಳಿಯುವಂತೆಯೂ ಈ ಪದ್ಯ ಉಪಯುಕ್ತವದೆ. ಮೀನುಗಳನ್ನು ಹಿಡಿವ ಬಲೆ ಹಾಗೂ ಅಂಗಳದಲ್ಲಿ ಆರಿಸಲು ಬಿಡಿಸಿದ್ದ ವಸ್ತ್ರಗಳನ್ನು ಹಕ್ಕಿಗಳು ಹಾಳುಮಾಡದಂತೆ ಹಾಸುವ ಬಲೆಗಳು ನಮಗೆ ಪರಿಚಿತಗಳಾಗಿವೆ. ಜಡೆಯನ್ನೋ, ಬಲೆಯನ್ನೋ ಹೆಣೆವಾಗ ಸೂಕ್ಷ್ಮತೆ ಹಾಗೂ ಸಲೀಲಭಾವಗಳು ಅವಶ್ಯವಾಗಿವೆ. 'ದೇವರ ದಯೆಯೇ ಜ್ಞಾನದ ಆರಂಭ'ವೆಂಬ ಗಾದೆಯು ಇಲ್ಲಿ ಬಂದು ಚೆಲುವಾಗಿದೆ.)

ಕ್ಷಯರೋಗ ವಿಷಯವಾಗಿ ನೀವು ತಿಳಿದಿರಬೇಕಾದ ವಸ್ತುಸ್ಥಿತಿ

ಕ್ಷಯರೋಗದಿಂದ ವರ್ಷಂಪ್ರತಿ 5,00,000ಕ್ಕೂ ಹೆಚ್ಚು ಮರಣಗಳು ಸಂಭವಿಸುತ್ತವೆ—ಅಂದರೆ, ದಿನವೊಂದರ 1 500 ಮರಣಗಳು ಅಥವಾ ಪ್ರತಿ ನಿಮಿಷಕ್ಕೆ ಒಂದು ಮರಣ ಸಂಭವಿಸುತ್ತಲೇ ಇದೆ! ಮತ್ತೆ 25,00 000 ಮಂದಿ, ಕ್ಷಯರೋಗ ಪೀಡಿತರಿರುತ್ತಾರೆ! ಕ್ಷಯರೋಗ ಚಿಕಿತ್ಸೆಯು ಅತಿ ವ್ಯಯದ್ದು, ಹೆಚ್ಚಿನವರು ಅದನ್ನು ತೆರಲಸಮರ್ಥರಿದ್ದಾರೆ.

ಮೊತ್ತವಾಗಿ ಇತರ ಎಲ್ಲ ಅಂಟುಜಾಡ್ಯಗಳಿಂದಾಗುವ ಮರಣಗಳಿಗಿಂತ ಕ್ಷಯರೋಗವು ಹೆಚ್ಚು ಮರಣಗಳನ್ನುಂಟುಮಾಡುತ್ತಿದೆ. ಕ್ಷಯರೋಗವು ಎಲ್ಲ ಹರಯದವರನ್ನು, ವಿಶೇಷವಾಗಿ 15ರಿಂದ 35ರೊಳಗಿನವರನ್ನು—ಕೊಲ್ಲುತ್ತಿದೆ.

ಕ್ಷಯರೋಗವನ್ನು ಹೋರಾಡುವ ಸಲುವಾಗಿ ಕ್ಷಯರೋಗ ಮುದ್ರೆ ಮಾರಾಟ ಚಳವಳವು ನಡೆಸಲ್ಪಡುತ್ತಿದೆ.

ಕ್ಷಯರೋಗ ಮುದ್ರೆಗಳನ್ನು ಅಧಿಕ



ಸಂಖ್ಯೆಯಲ್ಲಿ ಕೊಂಡುಕೊಂಡು ಉಪಯೋಗಿಸಿರಿ.

ಒಂದು ಮುದ್ರೆಯ ಕ್ರಯ ಹತ್ತು ನಯೆ ಪೈಸೆ ಮಾತ್ರ.

ಮುದ್ರೆಗಳು ಈ ಕೆಳಗಿನವರಲ್ಲಿ ದೊರೆವುವು: ಗೌರವ ಕಾರ್ಯದರ್ಶಿ, ಮೈಸೂರು ರಾಜ್ಯ ಕ್ಷಯರೋಗ ಸಂಘ, ಲೇಡಿ ವಿಲ್ಲಿಂಗ್ಡನ್ ಟಿಬಿ ಕ್ಲಿನಿಕ್ ಮತ್ತು ಡಿಸ್ಪೆನ್ಸರಿ, ಕೆಂಪೇಗೌಡ ರಸ್ತೆ, ಬೆಂಗಳೂರು-9 ಮತ್ತು ಮೈಸೂರು ರಾಜ್ಯದ ಇತರ ಏಜನ್ಸಿಗಳಿಂದ

ಭಾರತದಲ್ಲಿ ಹತ್ತನೇ ಕ್ಷಯರೋಗ ಮುದ್ರೆ ಮಾರಾಟ ಚಳವಳ.

(ಭಾರತ ಕ್ಷಯರೋಗ ಸಂಘದವರ ಹೊಣೆಗಾರಿಕೆಗೊಳಗಾದುದು.)

ಈ ಸ್ಥಳ: **ಒಂದಾಣೆ ಮಾಲೆ, ಮಂಗಳೂರು**—ಇವರ ಸೇವಾದಾನ.

Edited, Printed & Published by K. V. Shenoy
at The Prabhat Printers Ltd., Mangalcre.